ಬೇರೂರಿತು. ಗುಲಾಮಗಿರಿಯನ್ನು ಪೋಷಿಸುವುದೇ ವಸಾಹತುಶಾಹಿಯ ಪ್ರಮುಖ ಗುರಿ. ಇಂತಹ ಗುಲಾಮಗಿರಿಯನ್ನು ಈ ಕಾದಂಬರಿ ವಿರೋಧಿಸುತ್ತದೆ. ಯುದ್ಧ ನಡೆದು ಕಳಿಂಗರಾಜ್ಯಕ್ಕೆ ಜಯ ದೊರೆಯುತ್ತದೆ. ಕುಂತಳದ ರಾಜ ಕೃತವೀರ್ಯ ಬಂದಿಯಾಗುತ್ತಾನೆ. ಆದರೆ, ಮಂತ್ರಿಗಳಾದ ಕಪಿಲನಾಥ, ಅಮೋಘನಾಥ, ರಾಜ ಪ್ರತಾಪಚಂದ್ರ ಕೃತವೀರ್ಯನನ್ನು ಗುಲಾಮನನ್ನಾಗಿಸಿಕೊಳ್ಳದೆ ಗೌರವಯುತವಾಗಿ ನಡೆಸಿಕೊಂಡು ಅವನಿಗೆ ಅವನ ರಾಜ್ಯವನ್ನು ವಾಪಸ್ಸು ಕೊಡುತ್ತಾರೆ. ಸಹಬಾಳ್ವೆಯಿಂದ ಇರಬೇಕೆಂದು ಬಯಸುತ್ತಾರೆ. ಇದು ಕಾದಂಬರಿಯ ಧ್ವನಿ. ಒಂದು ಬಗೆಯ ಅನ್ಯೋಕ್ತಿ ಸಾಂಕೇತಿಕ ಪದ್ಧತಿಗಳನ್ನು ಬಳಸುವ ವಿಧಾನದಲ್ಲಿ ಈ ಕಾದಂಬರಿಯ ರಚನೆ ಇರುವುದನ್ನು ಗಮನಿಸಬಹುದು.

ಹತ್ತೊಂಬತ್ತನೇ ಶತಮಾನದ ಮಲಯಾಳಂ ಕಾದಂಬರಿಗಳು ಪ್ರೀತಿ, ಪ್ರೇಮದ ಸುಖಾಂತ್ಯದ ಹಾಗೂ ಅವಿಭಕ್ತ ಕುಟುಂಬವಾಗುವುದರೊಂದಿಗೆ ಮುಕ್ತಾಯವಾಗುತ್ತವೆ. ಗಂಡು ಹೆಣ್ಣಿನ ಪ್ರೀತಿ ಪ್ರೇಮಗಳು ಜೊತೆಗಾರರಲ್ಲಿಯೇ ನಡೆಯುತ್ತವೆ. ಮದುವೆಗಳು ಅವರಲ್ಲಿಯೇ ಆಗುತ್ತವೆ. ಪ್ರೀತಿಸುವುದು, ಅದಕ್ಕೆ ವ್ಯಕ್ತಿ ಮತ್ತು ಕುಟುಂಬದವರ ಸಮ್ಮತಿ ಪಡೆಯುವುದು, ನಂತರ ಮದುವೆ ಎಂದು ಇದನ್ನು ಸರಳವಾಗಿ ಹೇಳಬಹುದು. ಈ ಕಾದಂಬರಿಯಲ್ಲಿ ಮಂತ್ರಿಯ ಮಗ ತಾರಾನಾಥ ಮತ್ತು ಬುಡಕಟ್ಟಿನವರ ರೀತಿ ಬೆಳೆದ ರಾಜಕುಮಾರಿ ಕುಂದಲತ, ರಾಜಕುಮಾರನಾದ ಪ್ರತಾಪಚಂದ್ರ ಮತ್ತು ಮಂತ್ರಿ ಮಗಳಾದ ಸ್ವರ್ಣಮಯಿದೇವಿ ಇವರು ಜೊತೆಗಾರರು. ಇವರಲ್ಲಿ ಪ್ರೀತಿ ಬೆಳೆದು ಕುಟುಂಬಸ್ಥರ ಅನುಮತಿಯೊಂದಿಗೆ ಮದುವೆಯಾಗುತ್ತದೆ. ಈ ಪ್ರೀತಿ ಪ್ರೇಮಗಳು, ಮದುವೆಗಳು ಅವಿಭಕ್ತ ಕುಟುಂಬಗಳ ರಚನೆಗೆ ಕಾರಣವಾಗುತ್ತವೆ. ಈ ಮದುವೆಗಳಿಗೆ ಯಾವುದೇ ಅಡ್ಡಿ ಆತಂಕಗಳು ಬರುವುದಿಲ್ಲ. ಅವಿಭಕ್ತ ಕುಟುಂಬ ಇಲ್ಲಿ ರಾಷ್ಟ್ರಪ್ರೇಮದ ಪರಿಕಲ್ಪನೆಯ ಸಂಕೇತವೂ ಆಗಬಹುದು.

ಈ ಕಾದಂಬರಿಯಲ್ಲಿ ಯುದ್ಧ ವಿರೋಧಿ ಅಂಶಗಳಿವೆ. ಕುಂತಳದ ರಾಜನು ಯುದ್ಧಕ್ಕೆ ಬರುತ್ತಾನೆಂಬ ಸುದ್ದಿ ತಿಳಿದಾಗ ಮಂತ್ರಿಗಳು ಯುದ್ಧ ಸಾವು ನೋವಿಗೆ ಕಾರಣವಾಗುತ್ತದೆಂದು ಕುಂತಳ ರಾಜನನ್ನು ಒಪ್ಪಿಸಿ ಸಂಧಾನ ಮಾಡುವುದು ಸೂಕ್ತವೆಂದು ಚರ್ಚಿಸುತ್ತಾರೆ. ಆದರೆ, ಕುಂತಳದ ರಾಜ ಯುದ್ಧಕ್ಕೆ ಬಂದಾಗ ಯುದ್ಧ ಅನಿವಾರ್ಯವಾಗುತ್ತದೆ. ಯುದ್ಧದಲ್ಲಿ ಸಾವುಗಳ ವೈಭವೀಕರಣ ಮಾಡುವುದಿಲ್ಲ. ಆದರೆ, ಮಲಯಾಳಂನ ಸಾಮಾಜಿಕ ಕಾದಂಬರಿ 'ಇಂದುಲೇಖಾ'ದಲ್ಲಿ ಸಾವು ಕಂಡು ಬರುವುದಿಲ್ಲ. ಸಿ.ಪಿ. ರಾಮನ್ ಪಿಳ್ಳೈ ಬರೆದಿರುವ ಚಾರಿತ್ರಿಕ ಕಾದಂಬರಿಗಳಲ್ಲಿ ಯುದ್ಧ, ನೆತ್ತರಿನಿಂದ ರಾಜ್ಯಗಳ ವಿಸ್ತರಣೆ ಮತ್ತು ಸ್ಥಾಪನೆಯ ಬಗೆಗಿನ ವಿವರಗಳು ದಟ್ಟವಾಗಿ ಬರುತ್ತವೆ. 'ಘಾತಕವಧಂ' ಮತ್ತು 'ಸರಸ್ವತಿ ವಿಜಯಂ' ಎಂಬ ಎರಡೂ ಕಾದಂಬರಿಗಳು ಸಾವಿನಿಂದಲೇ ಪ್ರಾರಂಭವಾಗುತ್ತವೆ. ಬದುಕಿ ಉಳಿಯುವವರು ಕಥಾನಾಯಕರು ಮಾತ್ರ. ಆದರೆ, 'ಕುಂದಲತ'ದಲ್ಲಿ ಅನಿವಾರ್ಯವಾದ ಯುದ್ಧದಲ್ಲಿ ಮಾತ್ರ ಸೂಚ್ಯವಾಗಿ ಸಾವುಗಳ ಬಗ್ಗೆ ಇದೆ. ಅದನ್ನು ವೈಭವೀಕರಿಸಿಲ್ಲ. ಆದಷ್ಟೂ ಮಾನವೀಕರಣಗೊಳಿಸಲು ಈ ಕಾದಂಬರಿ ಪ್ರಯತ್ನಿಸಿದೆ.

'ಕುಂದಲತ' ಕಾದಂಬರಿ ನಾವು ದಾರಿ ತಪ್ಪಿದುದು ಎಲ್ಲಿ ಹಾಗೂ ಅದನ್ನು ಸರಿಪಡಿಸುವುದು ಹೇಗೆ ಎಂಬುದನ್ನು ಧ್ವನಿಸುತ್ತದೆ. ರಾಜ ಮತ್ತು ಹೊಸದಾಗಿ ಪಟ್ಟಾಭಿಷಕ್ತನಾದ ಪ್ರತಾಪಚಂದ್ರರು ಒಳ್ಳೆಯವರ ಸಲಹೆ ಪಡೆಯದೆ ಕಪಿಲನಾಥನನ್ನು ಶಿಕ್ಷೆಗೆ ಒಳಪಡಿಸಿದ್ದು ಮತ್ತು ಕುಂತಳರಾಜನಾದ ಕೃತವೀರ್ಯನಿಗೆ ಕಪ್ಪಕೊಡದಿದ್ದರೆ ಯುದ್ಧ ಅನಿವಾರ್ಯವೆಂಬ ಸಂದೇಶ ಕಳುಹಿಸಿದ್ದು ಇಲ್ಲಿ ತಪ್ಪಾಗುತ್ತದೆ. ಜೊತೆಗೆ ಮದುವೆಯಾದ ಹೊಸದರಲ್ಲಿ ರಾಜನಾದ ಪ್ರತಾಪಚಂದ್ರನು ವಿವೇಚನೆ ಇಲ್ಲದೆ ಕೃತವೀರ್ಯನಿಗೆ ಕಪ್ಪ ಕೊಡುವಂತೆ ಸಂದೇಶ ಕಳುಹಿಸಿ ತಾನೇ ಯುದ್ಧವನ್ನು ಮೈಮೇಲೆ